ತಾರೀಖು 29ನೆ ಜೂನ್ 1907.

ನಂ. 12329—Ml. 35-06—13, ಜವ್ರ್ಮಿದಾರ್ ಮತ್ತು ಸಾಹುಕಾರರಾದ ಮಿ॥ ಧನರಾಂ ಪ್ರಸಾದ್ ಎಂಬುವರನ್ನು, ಮೃತಪಟ್ಟ ಮಿ॥ ವೆಂಕಾಜಟ್ಟಿಗೆ ಬದಲಾಗಿ, ಕುಂಸಿ ಊರಿನ ಮ್ಯುನಿಸಿಪಲ್ ಬೋರ್ಡಿಗೆ ಸಭಿಕರನ್ನಾಗಿ ನೇಮಕ ಮಾಡಿದೆ.

ತಾರೀಖು 2ನೆ ಜುಲೈ 1907.

ನಂ. 15—Ml. 8-06-66, ಸನ್ 1894ನೆ ಇಸವಿಯ 7ನೆ ನಂಬರ್ ಭೂಸಂಪಾದನೆಯ ರೆಗ್ಯುಲೇಷನಿನ 6ನೆ ಪ್ರಕರಣವನ್ನನುಸರಿಸಿ ಇದರಿಂದ ಪ್ರಕಟಿಸುವುದೇನೆಂದರೆ,—ಈ ಕೆಳಗೆ ನಮೂದಾದ ಜಮೀನುಗಳೂ ಕಟ್ಟಡಗಳೂ ಸರ್ಕಾರಿ ಕೆಲಸಕ್ಕೆ ಎಂದರೆ ಬೆಂಗಳೂರು ಸಿಟಿಯ 3ನೆ ಡಿವಿಜನಿನ ಗಾಣಿಗರ ಪಿಳ್ಳಣ್ಣನ ಗಲ್ಲಿಯಲ್ಲಿ ಕಜರಾ ಬಂಡಿಗಳ ತಿರುಗಾಟಕ್ಕೆ ಬಂದು ಓಣಿಯನ್ನು ಏರ್ಪಡಿಸುವುದಕ್ಕೆ ಬೇಕಾಗಿವೆ. ಸದರಿ ರೆಗ್ಯುಲೇಷನಿನ 7 ಮತ್ತು 3 (c) ಪ್ರಕರಣಗಳ ಮೇರೆಗೆ ಬೆಂಗಳೂರು ಸಿಟ್ಟ ಮ್ಯುನಿಸಿಪಲ್ ಕೌನ್ಸಿಲಿನ ವೈಸ್ ಪ್ರೆಸಿಡೆಂಟರು ಸದರಿ ಜವಿಾನುಗಳನ್ನೂ ಮನೆಗಳನ್ನೂ ಹೊಂದಲು ಹುಕುಂ ಪಡೆಯಲಿಕ್ಕೆ ಅಧಿಕಾರ ಹೊಂದಿರುತ್ತಾರೆ:—

ಗ್ರಾಮ	ಪಟ್ಟಿ ನಂಬರ್	ಪೇಟೆಯ ಅಥವಾ ಬೀದಿಯ ಹೆಸರು.	ಸಂಖ್ಯೆ ಮನೆಯ	ಒಡೆಯರ ಹೆಸರು.	ಸರ್ಕಾರಕ್ಕೆ ಬೇಕಾಗಿರುವ ಸ್ವತ್ತಿನ ವಿವರ.	ಅಳತೆ		
						ಉದ್ದ ಅಡಿ.	ಅಗಲ ಅಡಿ.	ಒಟ್ಟು ವಿಸ್ತೀರ್ಣ
ಬೆಂಗಳೂರು ಪಟ್ಟಣ	1	ಗಾಣಿಗರ ಪಿಳ್ಳಣ್ಣನ ಗಲ್ಲಿ.	2	ಮುನಿನಂಜಪ್ಪ	ಮಣ್ಣಿನ ಮಾಳಿಗೆ	14¼	11¾	170
						11	9	99
						25⅛	18¼	424
					ಜುಮ್ಲಾ ಅಂಕಣಗಳು.	...	...	17
					ಪಾಳು ನಿವೇಶನ	12½	15	187½
						11	16	66
					ಜುಮ್ಲಾ ಚದರಗಜ.	...	...	28
	2	ಸುಬ್ಬಣ್ಣಾಚಾರಿಯ ಗಲ್ಲಿ.	23	ಡಿಟ್ಟೋ	ಮಣ್ಣಿನ ಮಾಳಿಗೆ	15	10	150
						21¾	3	65¼
					ಜುಮ್ಲಾ ಅಂಕಣಗಳು.	...	...	5 5/16
					ಪಾಳು ನಿವೇಶನ	11¾	15	176¼
						21¾	12	261
					ಜುಮ್ಲಾ ಚದರಗಜ.	...	...	48⅔

ತಾರೀಖು 2ನೆ ಜುಲೈ 1907.

ನಂ. 18—Med. 4-06—51, 1907ನೆ ಜುಲೈ 1ನೆ ತಾರೀಖಿನ ದಿನ ಕೆಲಸದಿಂದ ನಿವೃತ್ತಿ ಮಾಡಲ್ಪಡುವ ಆನರರಿ ಅಸಿಸ್ಟೆಂಟ್ ಸರ್ಜನ್ ಮಿ॥ ಎ. ಆರ್. ವೆಂಕ್ಟಸಾಮಿ ಪಿಳ್ಳೈಯವರಿಗೆ ಬದಲಾಗಿ, ತುಮಕೂರು ಡಿಸ್ಟ್ರಿಕ್ಟಿನಲ್ಲಿ ಡಿಸ್ಟ್ರಿಕ್ಟ್ ವೈದ್ಯ ಮತ್ತು ಆರೋಗ್ಯಾಧಿಕಾರಿಯವರಿಗೆ ಬದಲಿ ನೋಡುತ್ತಿರುವ ಅಸಿಸ್ಟೆಂಟ್ ಸರ್ಜನ್ ಮಿ॥ ಸಿ. ಅಪ್ಪಾದೊರೆ ಮೊದಲಿಯಾರ್‌ನ್ನು ಕೋಲಾರಕ್ಕೆ ಡಿಸ್ಟ್ರಿಕ್ಟ್ ವೈದ್ಯ ಮತ್ತು ಆರೋಗ್ಯಾಧಿಕಾರಿಯಾಗಿ ವರ್ಗಮಾಡಿದೆ.

ತಾರೀಖು 2ನೆ ಜುಲೈ 1907.

ನಂ. J. 25-Régis. 27-06, ಮೊದಲನೆ ತರಗತಿಯ ಸ್ಪೆಷಲ್ ಸಬ್ ರಿಜಿಸ್ಟ್ರಾರ್ ಎಸ್. ರಾಮಯ್ಯನವರು 1907ನೆ ಜುಲೈ 1ನೆ ತಾರೀಖಿನ ದಿನ ಕೆಲಸದಿಂದ ನಿವೃತ್ತರಾಗುವ ಪ್ರಯುಕ್ತ ಸ್ಪೆಷಲ್ ಸಬ್ ರಿಜಿಸ್ಟ್ರಾರುಗಳ ಇದರಡಿ, ಕಂಡ ಬಡತಿಗಳನ್ನು ರದ್ದುಮಾಡಿದೆ:—

ಸಬ್ ರಿಜಿಸ್ಟ್ರಾರ್ ಜಿ. ಶ್ರೀಕಂಠರಾಯರನ್ನು 3ನೆ ತರಗತಿಯಿಂದ 2ನೆ ತರಗತಿಗೂ, ಸಬ್ ರಿಜಿಸ್ಟ್ರಾರ್, ಬಿ. ಎಂ. ರಂಗಯ್ಯ ನಾಯಿಡುಯವರನ್ನು 4ನೆ ತರಗತಿಯಿಂದ 3ನೆ ತರಗತಿಗೂ ಬಡತಿ ಮಾಡಿದೆ.

ತಾರೀಖು 12ನೆ ಜೂನ್ 1907.

ನಂ. ರೆ. 10619—ಲ್ಯಾ. ರೆ. 580-06-2, ಬೆಂಗಳೂರು ಸಬ್ ಡಿವಿಜನಿನ ಸೀನಿಯರ್ ಅಸಿಸ್ಟೆಂಟ್ ಕಮಿಷನರ್ ಮಿ॥ ಸಿ. ರಾಮರಾಯರಿಗೆ 1907ನೆ ಇಸವಿಯ ಜೂನ್ 12ನೆ ತಾರೀಖಿನಿಂದ, ಅಥವಾ ಮತ್ತೊಬ್ಬರು ಆನಂದ ಚಾರ್ಜ್ ವಹಿಸುವ ತಾರೀಖಿನಿಂದ, ಒಂದು ತಿಂಗಳ ವರೆಗೆ ಪ್ರಿವಿಲೇಜ್ ರಜಾ ಕೊಟ್ಟಿದೆ.